ಸಾಕ್ಷಿ ಯನ್ನು ದಿಃ 02.04.2026 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪಿರ್ಯಾದುದಾರರ /ಪರ ವಕೀಲರಿಂದ**

1. ನಾನು ಬಿ.ಬಿ.ಎ., ಡಿ.ಇಡಿ ವಿದ್ಯಾಭ್ಯಾಸ ಮಾಡಿರುತ್ತೇನೆ.
2. ನನಗೆ ಎಸ್.ಬಿ.ಐ ಬ್ಯಾಂಕ್, ಯುಕೋ ಬ್ಯಾಂಕ್ ಹಾಗೂ ಕೋಟಕ್ ಮಹೀಂದ್ರಾ ಬ್ಯಾಂಕಿನಲ್ಲಿ ಖಾತೆಗಳು ಇವೆ.
3. ಕೋಟಕ್ ಮಹೀಂದ್ರಾ ಬ್ಯಾಂಕ್ ವೇತನದ ಖಾತೆ, ಯುಕೋ ಬ್ಯಾಂಕ್ ನಲ್ಲಿ ವ್ಯವಹಾರ ಮಾಡುತ್ತೇನೆ, ಎಸ್.ಬಿ.ಐ ನಲ್ಲಿ ವ್ಯವಹಾರ ಮಾಡುವುದಿಲ್ಲ.
4. ನಾನು ಎಸ್.ಬಿ.ಐ ಹಾಗೂ ಕೋಟಕ್ ಬ್ಯಾಂಕಿನಿಂದ ಚೆಕ್ ಪುಸ್ತಕ ಪಡೆದಿದ್ದೆ. ಖಾತೆ ನಂಬರ್ ನನಗೆ ನೆನಪಿಲ್ಲ.
5. ನಾನು 2 ಮೊಬೈಲ್ ನಂಬರ್ ಬಳಸುತ್ತೇನೆ. ಅವುಗಳ ನಂ.8861610127 ಹಾಗೂ 9319388635.
6. ನಂ.8861610127 ರಿಂದ ನಾನು ಹಣಕಾಸಿನ ವ್ಯವಹಾರ ಮಾಡುತ್ತೇನೆ.
7. ನನಗೆ ಕನ್ನಡ ಹಾಗೂ ಇಂಗ್ಲಿಷ್ ಓದಲು ಹಾಗೂ ಬರೆಯಲು ಬರುತ್ತದೆ. ನಾನು ಇಂಗ್ಲೀಷ್ ಭಾಷೆಯಲ್ಲಿ ಸಹಿ ಮಾಡುತ್ತೇನೆ.
8. ತನುಶ್ರೀ ಬಿನ್ ರಮೇಶ, ತಿಮಕಾಪುರ ಗ್ರಾಮ, ಚೌತಿ ಅಂಚೆ, ಕಸಬಾ ಹೋಬಳಿ, ಪಿರಿಯಾಪಟ್ಟಣ ತಾ, ಮೈಸೂರು ಜಿಲ್ಲೆ. ಸದರಿ ವಿಳಾಸದ ಅಂಚೆ ನನಗೆ ತಲುಪುತ್ತದೆ ಎಂದರೆ ಸರಿ. ನಾನು ಸದರಿ ವಿಳಾಸದಲ್ಲಿ 27 ವರ್ಷದಿಂದಲೂ ವಾಸವಿದ್ದೇನೆ. ಬೇರೆ ಕಡೆ ಎಲ್ಲೂ ನಾನು ಮನೆ ಮಾಡಿಲ್ಲ.
9. ನಾನು ಈಗ ಸತ್ಯ ಮೈಕ್ರೋ ಫೈನಾನ್ಸ್ ನಲ್ಲಿ ಕೆಲಸ ಮಾಡುತ್ತೇನೆ. ಅದಕ್ಕಿಂತ ಮುಂಚೆ ನಾನು 2022 ರಿಂದ 2023 ರ ವರೆಗೆ ಜ್ಞಾನ ಗಂಗೋತ್ರಿ ಶಾಲೆಯಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದೆ. ನನಗೆ ಶಾಲೆಯಲ್ಲಿ 6 ಸಾವಿರ ವೇತನ ಕೊಡುತ್ತಿದ್ದರು.
10. ನಾವು ಮನೆ ಕಟ್ಟಿ 2-3 ವರ್ಷವಾಗಿದೆ. ಸದರಿ ಮನೆಯ ಕೆಲಸ ಇನ್ನೂ ಬಾಕಿ ಇದೆ. ಸದರಿ ಮನೆಗೆ ಎಷ್ಟು ಖರ್ಚಾಗಿದೆ ಎಂದು ನನಗೆ ಗೊತ್ತಿಲ್ಲ. ನನ್ನ ಅಣ್ಣ ಮಾಡಿರುವುದು. ನೀವು ಸಹ ಸದರಿ ಮನೆ ಕಟ್ಟಲು ಸಹಾಯ ಮಾಡಿದ್ದೀರಾ ಎಂದರೆ ಸರಿಯಲ್ಲ.
11. ನಾನು ಮಾಡಿದ ಸಹಿಗಳನ್ನು ನೋಡಿದರೆ ಗುರುತಿಸುತ್ತೇನೆ.
12. ನಿಪಿ - 1 ರ ಚೆಕ್ಕು ನನ್ನದು. ಅದರಲ್ಲಿರುವ ಸಹಿ ಕೂಡ ನನ್ನದೇ.
13. ನಿಡಿ-2 ರಲ್ಲಿರುವ ಪೋಟೋದಲ್ಲಿರುವವರು ನನ್ನ ತಾಯಿ. ಅದರಲ್ಲಿರುವ ಸಹಿ ನನ್ನದು. ಸದರಿ ಸಹಿಯನ್ನು ನಿಡಿ-2(ಎ) ಎಂದು ಗುರುತಿಸಲಾಯಿತು. ಸದರಿ ದಾಖಲೆ ಪ್ರಕಾರ ಪಡೆದ ಸಾಲಕ್ಕೆ

ಹಾಗೂ ನನಗೆ ಸಂಬಂಧವಿಲ್ಲ. ಸದರಿ ಜಾಗದಲ್ಲಿ ಫೈನಾನ್ಸ್ ನವರು ಸಹಿ ಮಾಡಬೇಕು ಎಂದರೆ ಸರಿಯಲ್ಲ.

14. ನಿಡಿ- 2 ರಲ್ಲಿ ತನುಶ್ರೀ ಎಂದು ಬರೆದಿದೆ ಎಂದರೆ ಸರಿ. ಅದರಲ್ಲಿ ನಾಮಿನಿ ಕಾಲಂ ನಲ್ಲಿ ನಿಮ್ಮ ತಾಯಿ ಹೆಸರು ಶೋಭಾ ಎಂದು ಇದೆ ಎಂದರೆ ಸರಿ. ಸದರಿ ಎಂ.ಕೆ ಫೈನಾನ್ಸ್ ಯಾವ ಊರಿನಲ್ಲಿದೆ ಎಂದರೆ ನನಗೆ ಗೊತ್ತಿಲ್ಲ.
15. ಸದರಿ ಸಾಲ ನಿಮ್ಮ ಹೆಸರಿಗೆ ಆಗಿದೆಯಾ ಎಂದರೆ, ಇಲ್ಲ ನಮ್ಮ ತಾಯಿ ಹೆಸರಿಗೆ ಆಗಿದೆ.
16. ನಿಡಿ-4 ರಲ್ಲಿ ಸಿ.ಆರ್.ಒ ರವರ ಸಹಿ ಇದೆ ಎಂದರೆ ಸರಿ.
17. ನಿಡಿ - 2 ರಲ್ಲಿ ಸಿ.ಆರ್.ಒ ರವರ ಅಥವಾ ಫೈನಾನ್ಸ್ ನವರ ಸಹಿ ಇದೆಯಾ ಎಂದರೆ ಅದು ಖಾಸಗಿ ವ್ಯಕ್ತಿ ನಡೆಸುತ್ತಿರುವದರಿಂದ ಮಾಡಿಲ್ಲ ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ದಿಃ 27.06.2024 ರಂದು ಮಹೇಂದ್ರ ರವರು ನನ್ನ ತಾಯಿಗೆ ನೀಡಿರುತ್ತಾರೆ.
18. ನಿಡಿ -3 ರಿಂದ 5 ರ ದಾಖಲೆಗಳನ್ನು ನನಗೆ ನನ್ನ ತಾಯಿ ನೀಡಿರುತ್ತಾರೆ.
19. ಮಹೇಂದ್ರ ರವರ ಸಹಿಯನ್ನು ನಾನು ನಿಡಿ-2 ರಲ್ಲಿ ಮಾತ್ರ ನೋಡಿದ್ದೇನೆ. ಖುದ್ದಾಗಿ ನೋಡಿಲ್ಲ.
20. ನಿಡಿ-5 ರಲ್ಲಿ 1 ರಿಂದ 11 ನೇ ಕಾಲಂ ನಲ್ಲಿ ಮಹೇಂದ್ರ ರವರ ಸಹಿ ಇದೆ ಎಂದರೆ, ಸರಿಯಲ್ಲ. ಅವರ ಸಹಿ ಕಾಲಂ ನಂ.13 ರಿಂದ 17 ರ ವರೆಗೆ ಇದೆ ಎಂದು ನುಡಿಯುತ್ತಾರೆ. 1 ರಿಂದ 11 ರಲ್ಲಿರುವ ಸಹಿ ಮಹೇಂದ್ರ ರವರದ್ದು ಉಳಿಕೆ ಸಹಿಗಳು ಬೇರೆಯವರ ಸಹಿಗಳು ಎಂದರೆ ಸರಿಯಲ್ಲ.
21. ದೂರುದಾರರ ಸಂಸ್ಥೆ ಜೊತೆ ನಾನು ವ್ಯವಹಾರ ಮಾಡಿಲ್ಲ. ನನ್ನ ತಾಯಿ 5-6 ವರ್ಷ ವ್ಯವಹಾರ ಮಾಡಿದ್ದರು.
22. ಫೈನಾನ್ಸ್ ಲ್ಲಿ ಸಾಲ ನೀಡುವ ಸಮಯದಲ್ಲಿ ಒಂದು ಗುಂಪಿಗೆ 5 ಜನ ಸೇರಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಅವರು ಶೋಭ, ಶೃತಿ, ಶಾರದಮ್ಮ, ಜ್ಯೋತಿ ಹಾಗೂ ಇನ್ನೊಬ್ಬರು ಸೇರಿ ಸಾಲ ಪಡೆಯುತ್ತಿದ್ದರು ಎಂದರೆ, ಸರಿ. ಅದರಲ್ಲಿ ಹಲವಾರು ಜನ ಇದ್ದಾರೆ ಎಂದು ನುಡಿಯುತ್ತಾರೆ.
23. 2020 ರಿಂದಲೂ ನಿಮ್ಮ ತಾಯಿ ಸಮಸ್ತ ಹಾಗೂ ಬಿ.ಎಸ್.ಎಸ್. ನಲ್ಲಿ ಗುಂಪು ಸಾಲ ಪಡೆದಿದ್ದಾರೆ ಎಂದರೆ ಸರಿ. ಸದರಿ ಸಾಲ ಪಡೆಯಲು ಆಧಾರ್ ಕಾರ್ಡ್, ಮತದಾರರ ಚೀಟಿ, ಬ್ಯಾಂಕ್ ಪಾಸ್ ಬುಕ್, ನಾಮಿನಿ ಆಧಾರ್ ಕಾರ್ಡ್ ಹಾಗೂ ಫೋಟೋ ಪಡೆಯುತ್ತಾರೆ ಎಂದರೆ ಸರಿ. ಅವನ್ನು ಬಿಟ್ಟು ಬೇರೆ ದಾಖಲೆ ಪಡೆದಿಲ್ಲ ಎಂದರೆ ಕೆಲವರು ಚೆಕ್ ಪಡೆಯುತ್ತಾರೆ. ಸದರಿ ಎರಡು ಬ್ಯಾಂಕಿನವರು ಚೆಕ್

ಪಡೆಯುವುದಿಲ್ಲ ಎಂದರೆ ಸರಿ.

24. ನೀವು ನಿಮ್ಮ ವಕೀಲರಿಗೆ ನಾವು ಚೆಕ್ ನೀಡಿಲ್ಲ ಹಾಗೂ ಸಹಿ ಮಾಡಿಲ್ಲ ಎಂದು ಮಾಹಿತಿ ನೀಡಿದ್ದೀರಾ ಎಂದರೆ, ಇಲ್ಲ.

25. ನಿಮ್ಮ ತಾಯಿ ಚಿಟ್ಟೇನಹಳ್ಳಿ ಗ್ರಾಮ ಪಂಚಾಯತಿ ಅಧ್ಯಕ್ಷರಾಗಿದ್ದರು ಎಂದರೆ ಸರಿ. ಅವರು ಸಹ ಪಿರಿಯಾಪಟ್ಟಣ ಎಸ್.ಬಿ.ಐ ಬ್ಯಾಂಕ್ ಖಾತೆ ಹೊಂದಿದ್ದಾರೆ. ಸದರಿ ಖಾತೆಯಿಂದ ಅವರು ಅವರು ವ್ಯವಹಾರ ಮಾಡುತ್ತಾರೆ ಎಂದರೆ ಸರಿ.

26. ಸಮಸ್ತ ಹಾಗೂ ಬಿ.ಎಸ್.ಎಸ್. ನಲ್ಲಿ ಖಾತೆ ಮೂಲಕ ಮಾತ್ರ ವ್ಯವಹಾರ ಮಾಡುತ್ತಾರೆ ಎಂದರೆ, ಸಮಸ್ತದಲ್ಲಿ ಖಾತೆಗೆ ಹಾಕುತ್ತಾರೆ ಬಿ.ಎಸ್.ಎಸ್ ನಲ್ಲಿ ನಗದು ಸಹ ಕೊಡುತ್ತಾರೆ ಎಂದು ನುಡಿಯುತ್ತಾರೆ. ಬಿ.ಎಸ್.ಎಸ್ ನವರು ಸಹ ಖಾತೆ ಮೂಲಕ ಮಾತ್ರ ನೀಡುತ್ತಾರೆ ಎಂದರೆ ಸರಿಯಲ್ಲ.

27. ನಿಮ್ಮ ತಾಯಿ ಹಾಗೂ ನಿಮ್ಮ ಖಾತೆ ಬಗ್ಗೆ ದಾಖಲೆ ಹಾಜರುಪಡಿಸಲು ತೊಂದರೆ ಇಲ್ಲ.

28. ಪ್ರಕಾಶ ಎಂಬುವವರು ನನಗೆ ಗೊತ್ತಿಲ್ಲ.

29. ನಿಮ್ಮ ಖಾತೆಗೆ ಕಾರ್ತಿಕ್ ಎಂಬುವವರು ವ್ಯವಹಾರ ಮಾಡಿದ್ದಾರಾ ಎಂದರೆ ಸರಿ. ಅವರು ಯಾವುದೇ ಫೈನಾನ್ಸ್ ನಡೆಸುವುದಿಲ್ಲ. ಸದರಿ ಖಾತೆಗೆ ಫೈನಾನ್ಸ್ ಗೆ ಸಂಬಂಧಪಟ್ಟ ಹಣ ಸಹ ವರ್ಗಾವಣೆ ಆಗಿದೆ ಎಂದರೆ ಸರಿ.

30. ನೀವು ಗ್ರಾಮ ಶಕ್ತಿ ಸಂಘ ಹಾಗೂ ಸತ್ಯ ಸಂಘ ಪಿರಿಯಾಪಟ್ಟಣ ಹಾಗೂ ಕುಶಾಲನಗರದಲ್ಲಿ ಕೆಲಸ ಮಾಡಿದ್ದೀರಾ ಎಂದರೆ ಸರಿ. ನಾನು ಶಾಲೆ ಕೆಲಸ ಬಿಟ್ಟ ನಂತರ 6 ತಿಂಗಳ ಗ್ರಾಮ ಶಕ್ತಿ ಸಂಘ ಹಾಗೂ ನಂತರ 2023 ರಲ್ಲಿ ಸತ್ಯ ಸಂಘದಲ್ಲಿ ಕೆಲಸ ಮಾಡಿದ್ದೇನೆ.

31. ದೂರುದಾರರು 2020 ರಲ್ಲಿ ಚೆಕ್ ಪಡೆದಿದ್ದರಾ ಎಂದರೆ, ಇಲ್ಲ.

(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಕೋರಿದ್ದು, ಸಮಯ ನೀಡಿ ಮುಂದುಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ